# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ.

**ಸಿ.ಸಿ. ನಂ. 1609–2025.**

ಪಿರ್ಯಾದುದಾರರುಃ–        ಮಂಕಿ ಪೊಲೀಸ್ ಠಾಣೆ ,

ಮಂಕಿ,

ತಾಲೂಕುಃ– ಹೊನ್ನಾವರ (ಉ.ಕ.).

**– ವಿರುದ್ಧ –**

ಆರೋಪಿ–        ಶಿವಾನಂದ ತಂದೆ ಗಣಪತಿ ಹೆಗಡೆ,

ವಯಸ್ಸು ಸುಮಾರುಃ– 55 ವರ್ಷ,

ವೃತ್ತಿಃ– ಮೀನುಗಾರಿಕೆ,

ಸಾಕೀನಃ– ಮೂಡಗಣಪತಿ ದೇವಸ್ಥಾನದ ಹತ್ತಿರ, ಕರ್ಕಿ,

ತಾಲೂಕುಃ ಹೊನ್ನಾವರ.

****

## ಆಪಾದನೆ.

ಶ್ರೀ ಅನಿಲ್ ಜೋನ್ ಸಿಕ್ವೇರಾ., ಬಿ.ಬಿ.ಎ.,ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆ ಹೊರಿಸುತ್ತಿದ್ದೇನೆ.

ಮಂಕಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಕೆಳಗಿನೂರು ಗ್ರಾಮದ ರಾಷ್ಟ್ರೀಯ ಹೆದ್ದಾರಿ–66 ರಲ್ಲಿ ದಿನಾಂಕಃ 20–05–2025 ರಂದು ಬೆಳಿಗ್ಗೆ 06–45 ಗಂಟೆಯ ಸುಮಾರಿಗೆ ಆರೋಪಿಯಾದ ನೀವು, ನಿಮ್ಮ ಕಾರ್ ನಂ.ಕೆಎ–47/ಎಮ್–0506 ನೇದನ್ನು ಗುಣವಂತೆ ಕಡೆಯಿಂದ ಮಂಕಿ ಕಡೆಗೆ ಅತಿವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೋಗಿ ವೇಗದ ನಿಯಂತ್ರಣ ತಪ್ಪಿ ರಸ್ತೆಯ ಬದಿಯಲ್ಲಿರುವ ಡಿವೈಡರಗೆ ಡಿಕ್ಕಿ ಹೊಡೆದು ಅಪಘಾತಪಡಿಸಿದ್ದು, ಈ ಮೂಲಕ ಆರೋಪಿಯಾದ ನೀವು **ಭಾರತೀಯ ನ್ಯಾಯಾ ಸಂಹಿತೆ ಕಲಂ.** 281 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಸದರಿ ಅಪಘಾತದಿಂದ ಆರೋಪಿಯಾದ ನಿಮಗೆ ನಿಮ್ಮ ತಲೆ, ಕಿವಿ ಹತ್ತಿರ ಹಾಗೂ ಹೊಟ್ಟೆಯ ಭಾಗಕ್ಕೆ ತೀವ್ರ ಸ್ವರೂಪದ

ಗಾಯ-ನೋವು ಪಡಿಸಿಕೊಂಡಿದ್ದು, ಈ ಮೂಲಕ ಆರೋಪಿಯಾದ ನೀವು **ಭಾರತೀಯ ನ್ಯಾಯಾ ಸಂಹಿತೆ ಕಲಂ. 125 (ಬಿ)** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆ1: ಈಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?

ಆರೋಪಿಯ ಉತ್ತರ : ತಿಳಿಯಿತು

ಪ್ರಶ್ನೆ 2: ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

ಆರೋಪಿಯ ಉತ್ತರ : ಒಪ್ಪಿಕೊಳ್ಳುತ್ತೇನೆ

(ಈ ಮೂಲಕ ಪ್ರಮಾಣಿಸುವುದೇನೆಂದರೆ ಆರೋಪಿಯು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ )

ಸಹಿ ಇದೆ/-

**ದಿನಾಂಕಃ 06-03-2026.**

**(ಅನಿಲ್ ಜೋನ್ ಸಿಕ್ವೇರಾ).,**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ.,ಹೊನ್ನಾವರ.**

******

ಆರೋಪಿಯ ಸಹಿಃ- ಸಹಿ ಇದೆ